## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಬಕಾರಿ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸುವ ಷರತ್ತಿನೊಂದಿಗೆ ಅಬಕಾರಿ ಪೇದೆ ಮತ್ತು ಅಬಕಾರಿ ಉಪ ನಿರೀಕ್ಷಕರ ವೃಂದಕ್ಕೆ ಕಾರ್ಯಕಾರಿ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಪತ್ರ ಸಂಖ್ಯೆ: ಆಇ 77 ಇಪಿಎಸ್ 2024, ದಿನಾಂಕ:13.12.2024

2. ಅಬಕಾರಿ ಆಯುಕ್ತರ ಪತ್ರ ಸಂಖ್ಯೆ: ಇಸಿಇ/09/ಟಿಎಂಪಿ/2008 (ಭಾಗ-4), ದಿನಾಂಕ:04.06.2026 ಮತ್ತು ದಿನಾಂಕ:17.06.2026

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1) ರ ಪತ್ರದಲ್ಲಿ ಅಬಕಾರಿ ಇಲಾಖೆಯಲ್ಲಿ ಮಂಜೂರಾಗಿ ಖಾಲಿ ಇರುವ ಅಬಕಾರಿ ಉಪ ನಿರೀಕ್ಷಕ ಮತ್ತು ಅಬಕಾರಿ ಪೇದೆಗಳ ಹುದ್ದೆಗಳ ಪೈಕಿ ಕಲ್ಯಾಣ ಕರ್ನಾಟಕ ವೃಂದ ಸೇರಿದಂತೆ, 265 ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳನ್ನು ಮತ್ತು 942 ಅಬಕಾರಿ ಪೇದೆಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸಹಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (2) ರ ದಿನಾಂಕ:04.06.2026 ರ ಪತ್ರದಲ್ಲಿ ಪ್ರಸ್ತುತ THE KARNATAKA CIVIL SERVICE (CLASSIFICATION CONTROL AND APPEAL) RULES 1957EXCISE DEPARTMENT SCHEDULE-II ನ ಅನುಸಾರ ಅಬಕಾರಿ ಪೇದೆ ವೃಂದಕ್ಕೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನೇಮಕಾತಿ ಪ್ರಾಧಿಕಾರಿಗಳಾಗಿರುತ್ತಾರೆ, (Appointing authority) ಮತ್ತು ಕರ್ನಾಟಕ ಅಬಕಾರಿ ಸೇವೆಗಳು(ನೇಮಕಾತಿ) ನಿಯಮಗಳು 1966ರ ಪ್ರಕಾರ ಅಬಕಾರಿ ಪೇದೆ ವೃಂದಕ್ಕೆ ಕರ್ನಾಟಕ ಲೋಕ ಸೇವಾ ಆಯೋಗವು ಆಯ್ಕೆ ಪ್ರಾಧಿಕಾರವಾಗಿರುತ್ತದೆ.

ಅಬಕಾರಿ ಪೇದೆಗಳ ನೇಮಕಾತಿಯ ಬಗ್ಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ: ಕ.ಲೋ ಸೇ ಆ/ಪ.ಶಾ(3)/2024-25/586 ದಿನಾಂಕ: 27.01.2025ರ ಪತ್ರದಲ್ಲಿ ಅಬಕಾರಿ ಪೇದೆ ಹುದ್ದೆಯ ಆಯ್ಕೆ ಪಟ್ಟಿಯನ್ನು ಜಿಲ್ಲಾವಾರು ಪ್ರಕಟಿಸಲಾಗುತ್ತಿದೆ. ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವಾಗ ಅಭ್ಯರ್ಥಿಗಳ ಜಿಲ್ಲಾ ಆದ್ಯತೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಈ ಕುರಿತು ಹೆಚ್ಚಿನ ಸಂಖ್ಯೆಯಲ್ಲಿ ಕಾನೂನು ಪ್ರಕರಣಗಳು ದಾಖಲಾಗಿ ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಲಾಗಿರುತ್ತದೆ. ಅಬಕಾರಿ ಪೇದೆ ಹುದ್ದೆಗಳ ಆಯ್ಕೆ ಪಟ್ಟಿಯನ್ನು ರಾಜ್ಯ ಮಟ್ಟಕ್ಕೆ ಸಿದ್ಧಪಡಿಸಿ ಪ್ರಕಟಿಸಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಮಾಡಿಕೊಂಡು ಮುಂದಿನ ನೇಮಕಾತಿ ಪ್ರಕ್ರಿಯೆಗೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಸರ್ಕಾರದ ಆದೇಶ ಸಂ:ಸಕಇ/515/ಪಕವಿ/2026, ದಿನಾಂಕ: 08-05-2026 ರಲ್ಲಿ ಪರಿಶಿಷ್ಟ ಜಾತಿಗೆ ನಿಗದಿಪಡಿಸಿರುವ ಶೇ 15 ಮೀಸಲಾತಿಯಲ್ಲಿ ಪ್ರವರ್ಗ-ಎ ಶೇ.5.25, ಪ್ರವರ್ಗ-ಬಿ ಶೇ.5.25 ಮತ್ತು ಪ್ರವರ್ಗ-ಸಿ ಶೇ.4.5 ಒಳಮೀಸಲಾತಿಯನ್ನು ನಿಗದಿಪಡಿಸಲಾಗಿರುತ್ತದೆ ಮತ್ತು ಯಾವುದೇ ನೇಮಕಾತಿ ಅಧಿಸೂಚನೆಯಲ್ಲಿ 3ಕ್ಕಿಂತ ಕಡಿಮೆ ಬಿಂದುಗಳು / ಹುದ್ದೆಗಳು ಲಭ್ಯವಾಗುತ್ತಿದ್ದಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾದ ಹುದ್ದೆಗಳನ್ನು ಎಲ್ಲಾ 101 ಪರಿಶಿಷ್ಟ ಜಾತಿಗೆ ಸ್ಪರ್ಧಿಸಲು ಅವಕಾಶ ನೀಡಲು

Scanned with OKEN Scanner

ಆದೇಶವಾಗಿರುತ್ತದೆ.

ಅಬಕಾರಿ ಪೇದೆ ಹುದ್ದೆಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮತಿಸಲಾದ ಹುದ್ದೆಗಳನ್ನು ಪ್ರಸ್ತುತ ಜಾರಿಯಲ್ಲಿರುವಂತೆ ಎಲ್ಲಾ ಜಿಲ್ಲೆಗಳ ನೇಮಕಾತಿ ಪ್ರಾಧಿಕಾರಿಗಳಿಗೆ ಪುನರ್ ಹಂಚಿಕೆ ಮಾಡಬೇಕಾಗಿದ್ದು, ಆ ಸಂಧರ್ಭಗಳಲ್ಲಿ ಕೆಲವು ಜಿಲ್ಲೆಗಳಿಗೆ ಪರಿಶಿಷ್ಟ ಜಾತಿಗೆ 03 ಹುದ್ದೆಗಳು ಲಭ್ಯವಾಗುವ ಸಾಧ್ಯತೆಯಿದ್ದು,ಕೆಲವು ಜಿಲ್ಲೆಗಳಿಗೆ ಪರಿಶಿಷ್ಟ ಜಾತಿಗೆ 03 ಹುದ್ದೆಗಳು ಲಭ್ಯವಾಗುವ ಸಾಧ್ಯತೆಯಿರುವುದಿಲ್ಲ ಈ ಸಂದರ್ಭದಲ್ಲಿ ಒಂದೇ ವೃಂದದ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಕೆಲವು ಜಿಲ್ಲೆಗಳಲ್ಲಿ ಒಳಮೀಸಲಾತಿ ಅನ್ವಯಿಸಿ ಮತ್ತು ಕೆಲವು ಜಿಲ್ಲೆಗಳಲ್ಲಿ ಒಳಮೀಸಲಾತಿ ಅನ್ವಯಿಸದೆ ನೇಮಕಾತಿ ಅಧಿಸೂಚನೆ ಹೊರಡಿಸಬೇಕಾಗುವುದರಿಂದ ಈ ಕ್ರಮವನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸುವ ಸಾಧ್ಯತೆಯಿದ್ದು ಇದರಿಂದ ನೇಮಕಾತಿ ಪ್ರಕ್ರಿಯೆ ವಿಳಂಬವಾಗುವ ಸಾಧ್ಯತೆಯಿರುತ್ತದೆ.

ಆದ್ದರಿಂದ, ಅಬಕಾರಿ ಇಲಾಖೆಯಲ್ಲಿ ಅಬಕಾರಿ ಉಪ ನಿರೀಕ್ಷಕರು ಮತ್ತು ಅಬಕಾರಿ ಪೇದೆ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು, ಪ್ರಸ್ತುತ ಅಬಕಾರಿ ಪೇದೆ ಹುದ್ದೆಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕಾಗಿರುವುದರಿಂದ ಆಯ್ಕೆ ಪ್ರಾಧಿಕಾರದ ಮನವಿಯಂತೆ ರಾಜ್ಯ ಮಟ್ಟದ ಒಂದೇ ನೇಮಕಾತಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಹಾಗೂ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಇರುವ ಗೊಂದಲಗಳನ್ನು ನಿವಾರಿಸಲು ಅಬಕಾರಿ ಪೇದೆ ಹುದ್ದೆಗೆ ಹಾಗೂ ಇತರೆ ಎಲ್ಲಾ ಗ್ರೂಪ್- ಸಿ ಮತ್ತು ಡಿ ವೃಂದದ ಹುದ್ದೆಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ಅಬಕಾರಿ ಉಪ ಆಯುಕ್ತರ ಬದಲಾಗಿ ಅಬಕಾರಿ ಆಯುಕ್ತರನ್ನು ನೇಮಕಾತಿ ಪ್ರಾಧಿಕಾರಿಗಳನ್ನಾಗಿ ತಿದ್ದುಪಡಿ ಮಾಡುವುದು ಸೂಕ್ತವಾಗಿರುವುದರಿಂದ ಅಬಕಾರಿ ಇಲಾಖೆಯ ಗ್ರೂಪ್ -ಸಿ ಮತ್ತು ಗ್ರೂಪ್-ಡಿ ವೃಂದದ ಎಲ್ಲಾ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರಿಯು ಜಿಲ್ಲೆಯ ಜಿಲ್ಲಾಧಿಕಾರಿಗಳು/ಅಬಕಾರಿ ಉಪ ಆಯುಕ್ತರು ಬದಲಾಗಿ ಇಲಾಖಾ ಮುಖ್ಯಸ್ಥರಾದ ಅಬಕಾರಿ ಆಯುಕ್ತರು ಇವರನ್ನು ನೇಮಕಾತಿ ಪ್ರಾಧಿಕಾರಿಯನ್ನಾಗಿ ಹಾಗೂ ಇಲಾಖೆಯ ಎಲ್ಲಾ ವೃಂದಗಳ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರವಾಗಿ ಪರಾಮರ್ಶಿಸಿ ತಿದ್ದುಪಡಿ ಮಾಡಲು ಮತ್ತು THE KARNATAKA CIVIL SERVICE (CLASSIFICATION CONTROL AND APPEAL) RULES 1957 EXCISE DEPARTMENT SCHEDULE-IIನಲ್ಲಿ ನೇಮಕಾತಿ ಪ್ರಾಧಿಕಾರವನ್ನು ತಿದ್ದುಪಡಿ ಮಾಡಲು ಸರ್ಕಾರಕ್ಕೆಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಮುಂದುವರೆದು, ಮೇಲೆ ಓದಲಾದ ಕ್ರ.ಸಂ. (2) ರ ದಿನಾಂಕ:17.06.2026 ರ ಪತ್ರದಲ್ಲಿ ಅಬಕಾರಿ ಉಪ ನಿರೀಕ್ಷಕರು ಮತ್ತು ಅಬಕಾರಿ ಪೇದೆ ವೃಂದಕ್ಕೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುವುದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಧಿಸೂಚಿಸುವ ಷರತ್ತಿಗೊಳಪಟ್ಟು ಈ ಕೆಳಕಂಡ ಅಂಶಗಳ ಬಗ್ಗೆ ಕಾರ್ಯಕಾರಿ ಆದೇಶವನ್ನು ಹೊರಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| | ಅಬಕಾರಿ ಪೇದೆ |
|---|---|
| 1 | ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ನೇಮಕಾತಿ ಪ್ರಾಧಿಕಾರಿಗಳಾಗಿದ್ದು, ಪ್ರತಿ ಜಿಲ್ಲೆಗೆ ಪ್ರತ್ಯೇಕ ರೋಸ್ಟರ್ ಹಾಗೂ ಪ್ರರ್ಗವಾರು ಮೀಸಲಾತಿ ಮತ್ತು ಅಂತಿಮ ಆಯ್ಕೆ ಪಟ್ಟಿಯ ಬದಲಾಗಿ ರಾಜ್ಯ ಮಟ್ಟಕ್ಕೆ ಒಂದೇ ಆಯ್ಕೆ ಪಟ್ಟಿಯನ್ನು ಸಿದ್ದಪಡಿಸುವ ಸಂಬಂಧ ಅಬಕಾರಿ ಆಯುಕ್ತರನ್ನು ನೇಮಕಾತಿ ಪ್ರಾಧಿಕಾರಿಯನ್ನಾಗಿ ನೇಮಿಸಿ ತಿದ್ದುಪಡಿ ಮಾಡುವುದು. |
| 2 | ಅಬಕಾರಿ ಪೇದೆ ವೃಂದಕ್ಕೆ ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಲಾಗುತ್ತಿದ್ದು, ಸದರಿ ಸ್ಪರ್ಧಾತ್ಮಕ ಪರೀಕ್ಷೆಗೆ ಬಹು ಆಯ್ಕೆ ಪ್ರಶ್ನೆಗಳುಳ್ಳ (Objective type, Multiple |

Scanned with OKEN Scanner

| | |
|---|---|
| | choice) ಸಾಮಾನ್ಯ ಜ್ಞಾನ , ವಿಜ್ಞಾನ, ಭೂಗೋಳ, ಇತಿಹಾಸ, ಭಾರತದ ಸಂವಿಧಾನ, ರಾಷ್ಟ್ರೀಯ ಸ್ವತಂತ್ರ ಚಳುವಳಿ, ಮಾನಸಿಕ ಸಾಮರ್ಥ್ಯ ಮತ್ತು ನೈತಿಕ ಶಿಕ್ಷಣ ಒಳಗೊಂಡ ಸಾಮಾನ್ಯ ಅಧ್ಯಯನ 1 ಪತ್ರಿಕೆಯನ್ನು 100 ಅಂಕಗಳು ಮತ್ತು 2 ಗಂಟೆಗಳ ಪರೀಕ್ಷೆಯನ್ನು ನಿಗಧಿಪಡಿಸುವುದು. ಮತ್ತು ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ದೇಹದಾರ್ಢ್ಯ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಅರ್ಹ ಅಭ್ಯರ್ಥಿಗಳ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಿಂದಿನಂತೆ ನಡೆಸುವುದು. |
| 3 | ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಬಕಾರಿ ಪೇದೆ ( ಪುರುಷ) ಮತ್ತು ಅಬಕಾರಿ ಪೇದೆ (ಮಹಿಳೆ) ಎಂದು ಪ್ರತ್ಯೇಕ ವೃಂದಗಳಿದ್ದು, ಎರಡನ್ನು ಸೇರ್ಪಡೆಗೊಳಿಸಿ ಅಬಕಾರಿ ಪೇದೆ ಎಂದು ನಿಗಧಿಪಡಿಸುವುದು. |
| 4 | ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಆಯ್ಕೆ ಪ್ರಾಧಿಕಾರವು ಕರ್ನಾಟಕ ಲೋಕಾಸೇವಾ ಆಯೋಗವಾಗಿದ್ದು, ಅದನ್ನು ಮಾರ್ಪಡಿಸಿ ಸರ್ಕಾರ/ಸಕ್ಷಮ ಪ್ರಾಧಿಕಾರವು ತೀರ್ಮಾನಿಸುವ ಆಯ್ಕೆ ಪ್ರಾಧಿಕಾರವೆಂದು ತಿದ್ದುಪಡಿ ಮಾಡುವುದು. |

| | ಅಬಕಾರಿ ಉಪ ನಿರೀಕ್ಷಕರು |
|---|---|
| 1 | ಅಬಕಾರಿ ಉಪ ನಿರೀಕ್ಷಕರ ವೃಂದಕ್ಕೆ ಅರ್ಹ ಅಭ್ಯರ್ಥಿಗಳನ್ನು 2 ಪತ್ರಿಕೆಗಳುಳ್ಳ 1 ಪ್ರಬಂಧ (Essay) ಮತ್ತು ಅನುವಾದ (Translation) ಪತ್ರಿಕೆ ಮತ್ತು 2 ಸಾಮಾನ್ಯ ಅಧ್ಯಯನ ಪತ್ರಿಕೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಲಾಗುತ್ತಿದ್ದು, ಅದರ ಬದಲಾಗಿ ಸದರಿ ಸ್ಪರ್ಧಾತ್ಮಕ ಪರೀಕ್ಷೆಗೆ ಪದವಿ ಮಟ್ಟದ ಬಹು ಆಯ್ಕೆ ಪ್ರಶ್ನೆಗಳುಳ್ಳ (Objective type, Multiple choice) ಸಾಮಾನ್ಯ ಜ್ಞಾನ , ವಿಜ್ಞಾನ, ಭೂಗೋಳ, ಇತಿಹಾಸ, ಭಾರತದ ಸಂವಿಧಾನ, ರಾಷ್ಟ್ರೀಯ ಸ್ವತಂತ್ರಚಳುವಳಿ, ಮಾನಸಿಕ ಸಾಮರ್ಥ್ಯ ಮತ್ತು ನೈತಿಕ ಶಿಕ್ಷಣ ಒಳಗೊಂಡ ಸಾಮಾನ್ಯ ಅಧ್ಯಯನ 1 ಪತ್ರಿಕೆಯನ್ನು 100 ಅಂಕಗಳು ಮತ್ತು 2 ಗಂಟೆಗಳ ಪರೀಕ್ಷೆಯನ್ನು ನಿಗಧಿಪಡಿಸುವುದು. ಮತ್ತು ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ದೇಹದಾರ್ಢ್ಯ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಅರ್ಹ ಅಭ್ಯರ್ಥಿಗಳ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಿಂದಿನಂತೆ ನಡೆಸುವುದು. |
| 2 | ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಆಯ್ಕೆ ಪ್ರಾಧಿಕಾರವು ಕರ್ನಾಟಕ ಲೋಕಾಸೇವಾ ಆಯೋಗವಾಗಿದ್ದು, ಅದನ್ನು ಮಾರ್ಪಡಿಸಿ ಸರ್ಕಾರ/ಸಕ್ಷಮ ಪ್ರಾಧಿಕಾರವು ತೀರ್ಮಾನಿಸುವ ಆಯ್ಕೆ ಪ್ರಾಧಿಕಾರವೆಂದು ತಿದ್ದುಪಡಿ ಮಾಡುವುದು. |

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 225 ಇಪಿಎಸ್ 2025, ಬೆಂಗಳೂರು, ದಿನಾಂಕ: 07.07.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ,THE KARNATAKA CIVIL SERVICE (CLASSIFICATION CONTROL AND APPEAL) RULES 1957 EXCISE DEPARTMENT SCHEDULE-IIನಲ್ಲಿ ಮತ್ತು ಅಬಕಾರಿ ಅಬಕಾರಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಷರತ್ತಿಗೊಳಪಟ್ಟು ಈ ಕೆಳಕಂಡ ಅಂಶಗಳನುಸಾರ ಅಬಕಾರಿ ಪೇದೆ ಮತ್ತು ಅಬಕಾರಿ ಉಪ ನೀರಿಕ್ಷಕರುಗಳ ನೇಮಕಾತಿಯನ್ನು ತ್ವರಿತಗತಿಯಲ್ಲಿ ಮಾಡಲು ಆದೇಶಿಸಿದೆ.

**ಅಬಕಾರಿ ಪೇದೆ**

1. ನೇಮಕಾತಿ ಪ್ರಾಧಿಕಾರ – ಅಬಕಾರಿ ಆಯುಕ್ತರು.

Scanned with OKEN Scanner

2. ಶೈಕ್ಷಣಿಕ ಅರ್ಹತೆ - PUC-II ಉತ್ತೀರ್ಣತೆಯನ್ನು ನಿಗದಿಪಡಿಸುವುದು.
3. ಪರೀಕ್ಷೆ ಮಾದರಿ - ಸ್ಪರ್ಧಾತ್ಮಕ ಪರೀಕ್ಷೆಗೆ ಬಹು ಆಯ್ಕೆ ಪ್ರಶ್ನೆಗಳುಳ್ಳ (Objective type, Multiple choice)ಸಾಮಾನ್ಯ ಜ್ಞಾನ,ವಿಜ್ಞಾನ,ಭೂಗೋಳ, ಇತಿಹಾಸ, ಭಾರತದ ಸಂವಿಧಾನ, ರಾಷ್ಟ್ರೀಯ ಸ್ವತಂತ್ರ ಚಳುವಳಿ, ಮಾನಸಿಕ ಸಾಮರ್ಥ್ಯ ಮತ್ತು ನೈತಿಕ ಶಿಕ್ಷಣ ಒಳಗೊಂಡ ಸಾಮಾನ್ಯ ಅಧ್ಯಯನ 1 ಪತ್ರಿಕೆಯನ್ನು 100 ಅಂಕಗಳನ್ನು ಒಳಗೊಂಡ ಎರಡು ಗಂಟೆಗಳ ಪರೀಕ್ಷೆಯನ್ನು ಮಾತ್ರಾ ನಿಗದಿಪಡಿಸುವುದು.
4. ದೈಹಿಕ ಸಾಮರ್ಥ್ಯ ಪರೀಕ್ಷೆ - ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ದೇಹದಾರ್ಢ್ಯ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸುವುದು ಹಾಗೂ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವುದು.
5. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಬಕಾರಿ ಪೇದೆ ( ಪುರುಷ) ಮತ್ತು ಅಬಕಾರಿ ಪೇದೆ (ಮಹಿಳೆ) ಎಂದು ಪ್ರತ್ಯೇಕ ವೃಂದಗಳಿದ್ದು,ಎರಡನ್ನು ಸೇರ್ಪಡೆಗೊಳಿಸಿ ಅಬಕಾರಿ ಪೇದೆ ಎಂದು ನಿಗದಿಪಡಿಸುವುದು.
6. ಆಯ್ಕೆ ಪ್ರಾಧಿಕಾರ- ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರಸ್ತುತ ಆಯ್ಕೆ ಪ್ರಾಧಿಕಾರವಾಗಿರುತ್ತದೆ.

<u>ಅಬಕಾರಿ ಉಪ ನಿರೀಕ್ಷಕರು</u>

1. ಪರೀಕ್ಷೆ ಮಾದರಿ-ಸ್ಪರ್ಧಾತ್ಮಕ ಪರೀಕ್ಷೆಗೆ ಪದವಿ ಮಟ್ಟದ ಬಹು ಆಯ್ಕೆಪ್ರಶ್ನೆಗಳುಳ್ಳ (Objective type, Multiple choice) ಸಾಮಾನ್ಯ ಜ್ಞಾನ,ವಿಜ್ಞಾನ, ಭೂಗೋಳ, ಇತಿಹಾಸ,ಭಾರತದ ಸಂವಿಧಾನ, ರಾಷ್ಟ್ರೀಯ ಸ್ವತಂತ್ರಚಳುವಳಿ, ಮಾನಸಿಕ ಸಾಮರ್ಥ್ಯ ಮತ್ತು ನೈತಿಕ ಶಿಕ್ಷಣ ಒಳಗೊಂಡ ಸಾಮಾನ್ಯ ಅಧ್ಯಯನ-1 ಪತ್ರಿಕೆಯನ್ನು 100 ಅಂಕಗಳನ್ನು ಒಳಗೊಂಡ ಎರಡು ಗಂಟೆಗಳ ಪರೀಕ್ಷೆಯನ್ನು ಮಾತ್ರ ನಿಗದಿಪಡಿಸುವುದು.
2. ದೈಹಿಕ ಸಾಮರ್ಥ್ಯ ಪರೀಕ್ಷೆ - ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ದೇಹದಾರ್ಢ್ಯ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸುವುದು ಹಾಗೂ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವುದು.
3. ಆಯ್ಕೆ ಪ್ರಾಧಿಕಾರ - ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರಸ್ತುತ ಆಯ್ಕೆ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

07/07/2026.
(ಭೀಮಪ್ಪ ಪ. ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಅಬಕಾರಿ)
07/07

**ಇವರಿಗೆ:-**

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ (ಆ&ಸಂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು ಇಲಾಖೆ, ವಿಧಾನಸೌಧ, ಬೆಂಗಳೂರು.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,

Scanned with OKEN Scanner

ಮಲ್ಲೇಶ್ವರಂ, ಬೆಂಗಳೂರು.

6. ಅಬಕಾರಿ ಆಯುಕ್ತರು, ಶಾಂತಿನಗರ, ಬೆಂಗಳೂರು.
7. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned with OKEN Scanner